ಮಂಗಳವಾರ, ಜುಲೈ 26, 2016 | ಬೆಂಗಳೂರು | ₹ 4.00 | ಪುಟ 16 + 2 | ಸಂಪುಟ 69 | ಸಂಚಿಕೆ 207

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

# ಒತ್ತುವರಿ: ಮರಗಳನ್ನೇ ಸಾಯಿಸಿದ ಕತೆ ಇದು!

• ವೈ.ಗ. ಜಗದೀಶ್

**ಮುಖ್ಯಾಂಶಗಳು**

- ಡೀಮ್ಡ್ ಅರಣ್ಯ ಒತ್ತುವರಿ ಮಾಡಿದ ಪ್ರಕರಣ
- 430 ಮರಗಳಿಗೆ ಮರಗಚ್ಚು
- ಮರವಿಜ್ಞಾನ ಸಂಸ್ಥೆಯ ತಜ್ಞರಿಂದ ಅಧ್ಯಯನ ವರದಿ

ಬೆಂಗಳೂರು: ಅರಣ್ಯ ಒತ್ತುವರಿ ಆರೋಪದಿಂದ ಪಾರಾಗಲು 430 ಜೀವಂತ ಮರಗಳನ್ನು ಮರಗಚ್ಚು ಹಾಕಿ ಸಾಯಿಸಿದ ಅಮಾನವೀಯ ಪ್ರಕರಣ ಮೂಡಿಗೆರೆ ತಾಲ್ಲೂಕು ಹಾದಿಓಣಿ ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

‘ಆಹಾರ ಮತ್ತು ನೀರು ಪೂರೈಸುವ ತೊಗಟೆ ಕೆತ್ತಿ ಮರಗಳನ್ನು ಸಾಯಿಸಲಾಗಿದೆ’ ಎಂದು ಮರವಿಜ್ಞಾನ ತಜ್ಞರು ಅಧ್ಯಯನ ನಡೆಸಿ ದೃಢಪಡಿಸಿದ್ದಾರೆ. ದೇಶದಲ್ಲಿಯೇ ಇಂತಹ ಅಧ್ಯಯನ ನಡೆದ ಅಪರೂಪದ ಪ್ರಕರಣ ಇದಾಗಿದೆ.

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ, ಬಳಿಕ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹೀಗೆ ಮೂರು ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದ ಫಿಲೋಮಿನಾ ಪೆರಿಸ್ ಅವರೇ ಮರಗಳನ್ನು ಸಾಯಿಸಿದ ಆರೋಪಕ್ಕೆ ಗುರಿಯಾಗಿರುವ ಮಹಿಳೆ. ಡೀಮ್ಡ್ ಅರಣ್ಯವನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆ ಎಂದು 1999ರಲ್ಲಿಯೇ ಅರಣ್ಯ ಅಪರಾಧ ಮೊಕದ್ದಮೆಯನ್ನು ಪೆರಿಸ್ ಕುಟುಂಬದ ವಿರುದ್ಧ ದಾಖಲಿಸಲಾಗಿತ್ತು. ಈ ಪ್ರಕರಣ ಇತ್ಯರ್ಥವಾಗುವ ಮುನ್ನವೇ ಡೀಮ್ಡ್ ಅರಣ್ಯದ ಕುರುಹುಗಳನ್ನು ನಾಶಪಡಿಸಿರುವ ಆರೋಪಕ್ಕೂ ಅವರು ಗುರಿಯಾಗಿದ್ದಾರೆ.

ಮರಗಳನ್ನು ಸಾಯಿಸಿದ ಪ್ರಕರಣದ ಸಂಬಂಧ 2015ರ ಮೇ 25ರಂದು ಕಳಸ ವಲಯದ ಉಪ ಅರಣ್ಯಾಧಿಕಾರಿ ಎಫ್‌ಐಆರ್ ದಾಖಲಿಸಿದ್ದರು.

‘134.49 ಎಕರೆ ಡೀಮ್ಡ್ ಅರಣ್ಯವನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆಂಬ ಆರೋಪದಿಂದ ತಪ್ಪಿಸಿಕೊಳ್ಳಲು ಅವರು ಈ ಕೃತ್ಯವೆಸಗಿದ್ದಾರೆ ಎಂದು ದೂರಲಾಗಿದೆ.

ಡೀಮ್ಡ್ ಅರಣ್ಯದ ಗುಣಲಕ್ಷಣಗಳನ್ನು ನಾಶಪಡಿಸಲು ಫಿಲೋಮಿನಾ ಪೆರಿಸ್ ಮತ್ತು ಅವರ ಕುಟುಂಬ ಸದಸ್ಯರು ಭಾಗಿಯಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

‘ಮರಗಚ್ಚು ಹಾಕಿ ಸಾಯಿಸಿದ 430 ಮರಗಳಿಂದ 1044.944 ಘನ ಮೀಟರ್ ಗಳಷ್ಟು ನಾಟಾ ಇದೆ. ಮರಗಳನ್ನು 5ರಿಂದ 6 ವರ್ಷಗಳ ಹಿಂದೆ ಸಾಯಿಸಲಾಗಿದೆ’ ಎಂದು ಅರಣ್ಯ ಇಲಾಖೆ ಮೂಡಿಗೆರೆ ಜೆಎಂಎಫ್ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ.

**ಮರ ಕೊಂದಿದ್ದು ಸತ್ಯ:** ಮರಗಳನ್ನು ನಿಜವಾಗಿಯೂ ಕೊಲ್ಲಲಾಗಿದೆಯೇ? ಆಕಸ್ಮಿಕವಾಗಿ ಸಾವು ಕಂಡಿವೆಯೇ ಎಂಬುದರ ಪತ್ತೆಗೆ ಅರಣ್ಯ ಇಲಾಖೆ ವೈಜ್ಞಾನಿಕ ಅಧ್ಯಯನಕ್ಕೆ ಮುಂದಾಗಿರುವುದರಿಂದ ಈ ಪ್ರಕರಣದ ಕುತೂಹಲಕಾರಿ ಘಟ್ಟ ತಲುಪಿದೆ

ಕೊಪ್ಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ, 2015ರ ಆಗಸ್ಟ್ 12ರಂದು ಬೆಂಗಳೂರಿನಲ್ಲಿರುವ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕರಿಗೆ ಬರೆದ ಪತ್ರದಲ್ಲಿ, ಮರಗಚ್ಚು ಮಾಡಿರುವ 430 ಮರಗಳು ಬದುಕುಳಿಯುವ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಬೇಕೆಂದು ಕೋರಿದ್ದರು.

ಇದರನ್ವಯ 2016ರ ಜನವರಿ 19 ಮತ್ತು 20 ರಂದು ಆವಂತಿ ಎಸ್ಟೇಟ್ ಗೆ ಭೇಟಿ ನೀಡಿದ್ದ ಮರ ವಿಜ್ಞಾನಿಗಳಾದ ಡಾ. ಆರ್. ಸುಂದರರಾಜ್ (ಎಂಟಾಮಾಲಜಿಸ್ಟ್), ಡಾ. ಎ.ಮುತ್ತು ಕುಮಾರ್ (ಪೆಥಾಲಜಿಸ್ಟ್) ಹಾಗೂ ಲಿಂಗಪ್ಪ (ಸಂಶೋಧನಾ ಸಹಾಯಕ) ಅವರು ಒಣಗಿದ್ದ 430 ಮರಗಳ ಅಧ್ಯಯನ ನಡೆಸಿದರು.



ಒತ್ತುವರಿಯಾದ ತೋಟದಲ್ಲಿ ಮರಗಚ್ಚು ಹಾಕಿರುವುದು

ಕೊಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಮರವಿಜ್ಞಾನ ಸಂಸ್ಥೆ ನಿರ್ದೇಶಕ ಸಲ್ಲಿಸಿರುವ ವರದಿ **‘ಪ್ರಜಾವಾಣಿ’**ಗೆ ಲಭ್ಯವಾಗಿದೆ.

‘ಮರದ ಕಾಂಡದ ಸುತ್ತಲಿನ ತೊಗಟೆಯನ್ನು ಕೆಳಗಿನಿಂದ ಮೇಲಕ್ಕೆ 30ರಿಂದ 60 ಸೆಂ.ಮೀ ಎತ್ತರದಷ್ಟು ಮರಗಚ್ಚು ಹಾಕಿ ತೆಗೆಯಲಾಗಿದೆ. ಮರಗಚ್ಚಿನಿಂದ ಕೆಳಗಿರುವ ಮರದ ಕಾಂಡದಲ್ಲಿ ಹಸಿರು ಚಿಗುರಿದೆ. ಆದರೆ ಮರಗಚ್ಚು ಹಾಕಿರುವ ಜಾಗಕ್ಕಿಂತ ಮೇಲ್ಭಾಗದ ಮರ, ರೆಂಬೆ, ಕೊಂಬೆಗಳು ಒಣಗಿ ನಿಂತಿವೆ. ಮರದ ಮೇಲ್ಭಾಗಕ್ಕೆ ಆಹಾರ ಮತ್ತು ನೀರು ಪೂರೈಕೆಯಾಗದೇ ಇರುವುದರಿಂದ ಮರ ಸತ್ತು ಹೋಗಿದೆ’ ಎಂದು ಮರವಿಜ್ಞಾನ ಸಂಸ್ಥೆಯ ವರದಿ ಹೇಳಿದೆ.

ಈ ವರದಿ ಆಧರಿಸಿ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿ 2016ರ ಫೆಬ್ರವರಿ 23ರಂದು ಕಳಸ ವಲಯ ಅರಣ್ಯಾಧಿಕಾರಿಗೆ ಕೊಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಡತ ರವಾನಿಸಿದ್ದಾರೆ.

‘ಮರವಿಜ್ಞಾನ ಸಂಸ್ಥೆ ನೀಡಿದ ವರದಿಯಲ್ಲಿ ಮರಗಚ್ಚು ಹಾಕಿ ಮರ ಸಾಯಿಸಿರುವುದು ದೃಢಪಟ್ಟಿದೆ. ಹೀಗಾಗಿ ಆರೋಪಿಗಳಾದ ಫಿಲೋಮಿನಾ ಪೆರಿಸ್ ಮತ್ತಿತರರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ(ಚಾರ್ಜ್ ಶೀಟ್) ಸಲ್ಲಿಸಿ, ಮುಂದಿನ ಕ್ರಮ ಕೈಗೊಳ್ಳಬೇಕು’ ಎಂದು ಆದೇಶಿಸಿದ್ದಾರೆ.

‘ಫಿಲೋಮಿನಾ ಪೆರಿಸ್ ಅವರು ಒತ್ತುವರಿ ಮಾಡಿರುವ ಅರಣ್ಯ ಪ್ರದೇಶ ಹೈಕೋರ್ಟ್ ಆದೇಶದ ಅನ್ವಯ ಅರಣ್ಯ ಇಲಾಖೆಗೆ ಸೇರಿದ್ದು, ಅತಿಕ್ರಮಣ ನಿಷೇಧಿಸಿದೆ’ ಎಂದು 4 ಕಡೆ ನಾಮಫಲಕ ಹಾಕಲಾಗಿತ್ತು. ಈ ಪೈಕಿ 3 ನಾಮಫಲಕಗಳನ್ನು ಫಿಲೋಮಿನಾ ಪೆರಿಸ್ ಮತ್ತು ಇತರರು ಕದ್ದು ಒಯ್ದಿದ್ದಾರೆ. ಅವರ ವಿರುದ್ಧ ನ್ಯಾಯಾಂಗ ಆದೇಶದ ಉಲ್ಲಂಘನೆ ಮತ್ತು ಕಳ್ಳತನದ ಆರೋಪದಡಿ ಮೊಕದ್ದಮೆ ದಾಖಲಿಸಿಕೊಂಡು ಕಾನೂನು ರೀತಿ ಕ್ರಮ ಕೈಗೊಳ್ಳಬೇಕು’ ಎಂದು ಕಳಸ ವಲಯ ಅರಣ್ಯಾಧಿಕಾರಿ 2015 ಆಗಸ್ಟ್ 13ರಂದು ಬಾಳೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಆದರೆ ಪೊಲೀಸರು ಈವರೆಗೂ ಯಾವುದೇ ಕ್ರಮ ಜರುಗಿಸಿಲ್ಲ ಎಂಬ ಆರೋಪವೂ ಇದೆ.

**ಯಾವ ಮರಗಳು?**

| | |
|---|---|
| ಮತ್ತಿ | 276 |
| ತಾರೆ | 27 |
| ಬೀಟೆ | 6 |
| ನಂದಿ | 25 |
| ಹೊನ್ನೆ | 19 |
| ಹೊನಲು | 39 |
| ಎತ್ತೇಗ | 13 |
| ಜಾಲ | 7 |
| ತಡಸಲ | 4 |
| ಹೆಬ್ಬಲಸು | 1 |
| ಸಂಪಿಗೆ | 1 |
| ಕೆಂದಾಳೆ | 1 |
| ಇತರೆ ಕಾಡುಜಾತಿಯ ಮರಗಳು ಸೇರಿ ಒಟ್ಟು | 430 |

## ಮರಗಚ್ಚು ಎಂದರೆ...

ಹಸಿ ಮರ ಕಡಿದರೆ ಅರಣ್ಯ ಇಲಾಖೆ ಅಧಿಕಾರಿಗಳು ಮೊಕದ್ದಮೆ ಹಾಕುತ್ತಾರೆ. ಒಣಗಿದ ಮರಕ್ಕೆ ಮರಗಚ್ಚು ಹಾಕಿ ಮರ ಒಣಗಿಸಲಾಗುತ್ತದೆ. ಹಸಿ ಮರ ಕಡಿದರೆ ಶಿಕ್ಷೆಯಲ್ಲಿ ಸ್ವಲ್ಪ ವಿನಾಯಿತಿ ಇದೆ. ಬೇಗನೆ ಮರ ಸಾಯಿಸಲು ಮರಗಚ್ಚು ಹಾಕಿದ ಜಾಗಕ್ಕೆ ಪಾದರಸ ಅಥವಾ ತಿನ್ನುವ ಇಂಗು ಹಾಕುವ ಕ್ರಮವೂ ಜಾರಿಯಲ್ಲಿದೆ.

## ಖರೀದಿಸಿದ ತೋಟ: ಪೆರಿಸ್

‘ಸದರಿ ಕಾಫಿತೋಟವನ್ನು 1985 ಕ್ಕಿಂತ ಮೊದಲು ಬೇರೆಯವರಿಂದ ಖರೀದಿಸಿದ್ದೇನೆ. 25 ಎಕರೆ ಒತ್ತುವರಿ ಮಾಡಿರುವುದನ್ನು ಮುಚ್ಚಿಟ್ಟಿಲ್ಲ. ನಮಗೇ ಮಂಜೂರು ಮಾಡಿಕೊಡಿ ಎಂದು ಸರ್ಕಾರಕ್ಕೆ ಹಲವು ಬಾರಿ ಅರ್ಜಿ ಸಲ್ಲಿಸಿದ್ದೇನೆ ಎಂದು ಫಿಲೋಮಿನಾ ಪೆರಿಸ್ ಹೇಳಿದ್ದಾರೆ.

ನಾನು ಅಥವಾ ನನ್ನ ತೋಟದಲ್ಲಿ ಕೆಲಸ ಮಾಡುವವರು ಮರಗಚ್ಚು ಹಾಕಿ ಕೊಂದಿದ್ದಾರೆ ಎಂಬುದನ್ನು ಅರಣ್ಯ ಇಲಾಖೆಯವರು ನೋಡಿದ್ದಾರೆಯೇ? ಫೋಟೋ ತೆಗೆದಿದ್ದಾರೆಯೇ ನಾಮಫಲಕ ಹಾಕಿದ್ದೇ ಗೊತ್ತಿಲ್ಲ, ಇನ್ನು ಕಳವು ಮಾಡುವುದು ಎಲ್ಲಿಂದ ಬಂತು? ಮರ ಸಾಯಿಸುವ ಕೆಲಸ ನಾನು ಮಾಡಿಲ್ಲ. ಅರಣ್ಯ ಇಲಾಖೆಯವರ ಆರೋಪ ಸುಳ್ಳು ಎಂದು ಫಿಲೋಮಿನಾ ಪೆರಿಸ್ ಹೇಳಿದ್ದಾರೆ.